# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1308(1588)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ವಿಷಯ : ಸರ್ವೋಚ್ಚ ನ್ಯಾಯಾಲಯದಲ್ಲಿರುವ ರಾಜ್ಯದ ವ್ಯಾಜ್ಯ/ ವಿವಾದಗಳ ಬಗ್ಗೆ

(ಅ) ಪ್ರಸ್ತುತ ರಾಜ್ಯವು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿ ಮುನ್ನೆಡೆಸುತ್ತಿರುವ ವ್ಯಾಜ್ಯ/ವಿವಾದಗಳು ಯಾವುವು; ಸದರಿ ವ್ಯಾಜ್ಯಗಳನ್ನು ರಾಜ್ಯದ ಪರವಾಗಿ ಮುನ್ನೆಡೆಸುತ್ತಿರುವ ವಕೀಲರು, ವಕೀಲರ ತಂಡ ಸೇರಿದಂತೆ ವ್ಯಾಜ್ಯ/ವಿವಾದವಾರು ಪ್ರತ್ಯೇಕ ಮಾಹಿತಿಯನ್ನು ಸಂಪೂರ್ಣವಾಗಿ ಒದಗಿಸುವುದು;

(ಆ) ಸದರಿ ವ್ಯಾಜ್ಯಗಳನ್ನು ಮಂಡಿಸುತ್ತಿರುವ ವಕೀಲರು/ವಕೀಲರ ತಂಡಕ್ಕೆ ಕಳೆದ 15 ವರ್ಷಗಳಲ್ಲಿ ಪಾವತಿಸಲಾದ ಶುಲ್ಕಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ; ಹಾಗಿದ್ದಲ್ಲಿ, ಇದುವರೆವಿಗೆ ಪಾವತಿಸಲಾದ ಶುಲ್ಕದ ಸಂಪೂರ್ಣ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸುವುದು;

(ಇ) ದಿನೇ ದಿನೇ ವ್ಯಾಜ್ಯಗಳು ಇತ್ಯರ್ಥವಾಗದೇ ಹತ್ತಾರು ವರ್ಷಗಳಿಂದ ಮುಂದುವರೆಯುತ್ತಿರುವುದರಿಂದ, ರಾಜ್ಯ ಬೊಕ್ಕಸಕ್ಕೆ ಹೊರೆಯಾಗಿ ಪರಿಣಮಿಸುತ್ತಿರುವ ಬಗ್ಗೆ ಸರ್ಕಾರವು ಗಂಭೀರವಾಗಿ ಆಲೋಚಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರದ ಆಲೋಚನೆ ಹಾಗೂ ಮುಂದಿನ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು)